ಶ್ರೀ ಸುಧೀಂದ್ರರಾವ್ ಕಸಬೆ.—೧೯೭೯-೮೦ರಲ್ಲಿ ೩೭ ಜನರನ್ನು ತೆಗೆದುಕೊಂಡಿದ್ದೇವೆ. ಅವರು ಕಂಪ್ಲೈಂಟ್ ಕೊಟ್ಟ ಕಾರಣಕ್ಕಾಗಿ ಮುಂದೆ ಸೀನಿಯಾರಿಟಿ ಪ್ರಕಾರ ತೆಗೆದುಕೊಂಡಿದ್ದೇವೆ.

ಶ್ರೀ ಡಿ.ಬಿ. ಗಂಗಾಧರಪ್ಪ.— ಕಳೆದವರ್ಷ ಸೆಸ್ಸು ಎಷ್ಟು ಕಲೆಕ್ಟಾಗಿದೆ, ಈ ವರ್ಷ ಎಷ್ಟಾಗಿದೆ, ಲೀಕೇಜು ಎಷ್ಟಾಗಿದೆ ಎಂದು ನೋಡಿದಾಗ ವೇಮೆನ್ ಅವಶ್ಯಕತೆ ಇದೆ ಎಂದು ಕಂಡುಬರುತ್ತದೆ. ಸರಿಯಾಗಿ ಎನ್‌ಕ್ವೈರಿಮಾಡಿ, ನೂರಾರು ಜನ ಹೇಳುತ್ತಿದ್ದಾರೆ. ಸಾವಿರಾರು ರೂಪಾಯಿಗಳು ಸೆಸ್‌ನಲ್ಲಿ ಲೀಕೇಜಾಗುತ್ತಾ ಇದೆ. ಅಧಿಕಾರಿಗಳು ಮತ್ತು ಪರ್ತಕರು ಶಾಮೀಲಾಗಿದ್ದಾರೆಂದು ಹೇಳುತ್ತಿದ್ದಾರೆ ಸಾವಿರಾರು ಚೀಲ ಅಕ್ಕಿ ಮಾರ್ಕೆಟ್‌ಗೆ ಬರುತ್ತದೆ, ಅದರಲ್ಲಿ ಅರ್ಧ ಭಾಗಕ್ಕೂ ಸೆಸ್ ಕೊಡುತ್ತಾ ಇಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಸುಧೀಂದ್ರರಾವ್ ಕಸಬೆ.—ಒಂದು ವೇಳೆ ಅದು ಸರ್ಕಾರದ ಗಮನಕ್ಕೆ ಬಂದರೆ ಪುನಃ ಲೈಸನ್ಸ್ ರಿನ್ಯೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಂಲ್ಲಾರಗೌಡ ಶಂಕರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ರೆಗ್ಯುಲೇಟಿಡ್ ಖಾತೆಯ ಮಂತ್ರಿಗಳನ್ನು ಕೇಳುತ್ತೇನೆ. ೧೦ ರೂಪಾಯಿ ತೆಗೆದುಕೊಂಡು ವೇಮೆನ್‌ಗೆ ಲೈಸೆನ್ಸ್ ರಿನ್ಯೂ ಮಾಡುತ್ತೀರಿ. ಈ ವೇಮೆನ್‌ರನ್ನು ಸರ್ಕಾರಿ ನೌಕರರನ್ನಾಗಿ ಪರಿವರ್ತಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಸುಧೀಂದ್ರರಾವ್ ಕಸಬೆ.—ಈಗ ಈ ಪ್ರಶ್ನೆ ಸರ್ಕಾರದ ಗಮನವಲ್ಲಿ ಇಲ್ಲ.

Strength of Casual Employees in Bangalore Water Supply and Sewerage Board

170 SRI B.V. RAMACHANDRA REDDY (Varthur) —Will the Minister for Housing and Urban Development be pleased to state : —

(a) how many have been employed on casual basis (daily wage NMR etc ,) in Bangalore Water Supply and Sewerage Board during 1979-80 till the end of June 1980 ;

(b) of them how many belong to Backward and Scheduled Castes ;

(c) the procedure followed in selecting the above persons for taking them into work ?

SRI DHARAMSINGH NARAYANSINGH ((Minister for Housing and Urban Development)—

(a) 163.

(b) Backward Class ... 98
Scheduled Castes ... 40

(c) By appointment on daily wages under N.M.R.

ಶ್ರೀ ಬಿ ವಿ. ರಾಮಚಂದ್ರ ರೆಡ್ಡಿ.—ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನಲ್ಲಿ ಕ್ಯಾಶುವಲ್ ವರ್ಕ್ಸ್‌ಗೆ ಇದುವರೆಗೆ ತೆಗೆದುಕೊಂಡಿರುವ ಜನ ಎಷ್ಟು, ನೇಚರ್ ಆಫ್ ವರ್ಕ್ ಏನು?

† ಶ್ರೀ ಧರ್ಮಸಿಂಗ್.—೧೬೩ ಜನರನ್ನು ತೆಗೆದುಕೊಂಡಿದ್ದೇವೆ. ಪ್ರಾಜೆಕ್ಟ್ ಮೇಂಟೆನೆನ್ಸ್ ಗೋಸ್ಕರ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಪ್ರಾಜೆಕ್ಟ್ ಬೆಂಗಳೂರು ಸೌರಗಡೆ ನಡೆಯುತ್ತಾ ಇದೆ. ಕಾವೇರಿ ಎರಡನೇ ಹಂತದ ಕೆಲಸ ಬೆಂಗಳೂರಿನ ಹೊರಗಡೆ ನಡೆಯುತ್ತಾ ಇದೆ. ಅದಕ್ಕೆ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದುಕೊಳ್ಳಲಿಕ್ಕೆ ಯಾವರೀತಿ ಪ್ರೊಸೀಜರನ್ನು ಫಾಲೋ ಮಾಡುತ್ತಾ ಇದ್ದೀರಿ?

ಶ್ರೀ ಧರ್ಮಸಿಂಗ್.—ಡೈಲೀ ವೇಜಸ್ ಮೇಲೆ ತೆಗೆದುಕೊಳ್ಳುತ್ತಾ ಇದ್ದೇವೆ, ಅದಕ್ಕೆ ಪ್ರೊಸೀಜರ್ ಇಲ್ಲ. ಆದರೂ ಕೂಡ ತೆಗೆದುಕೊಳ್ಳತಕ್ಕದ್ದರಲ್ಲಿ ಹಿಂದುಳಿದ ವರ್ಗದವರಿಗೆ, ಹರಿಜನ-ಗಿರಿಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದೇವೆ. ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಿಂದ ಜನರ ಪಟ್ಟಿಯನ್ನು ತರಿಸಿ ತೆಗೆದುಕೊಳ್ಳಲಿಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಪ್ರಾಜೆಕ್ಟ್ ಕೆಲಸ ನಡೆಯುತ್ತಾ ಇರುವುದು ಗ್ರಾಮಾಂತರ ಪ್ರದೇಶದಲ್ಲಿ. ನೀರು ನಗರ ಪ್ರದೇಶದಲ್ಲಿ ಕೊಡತಕ್ಕಂಥಾದ್ದು, ಕ್ಯಾಶುವಲ್ ವರ್ಕರ್ಸ್ ಕೆಲಸಕ್ಕೆ ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕು ಮುಂತಾದ ಕಡೆ ಅರ್ಜಿಕೊಟ್ಟರೆ ತಿರಸ್ಕರಿಸಿದ್ದಾರೆ. ಗ್ರಾಮಾಂತರಪ್ರದೇಶದಲ್ಲಿ ಅಂದರೆ ಎಲ್ಲಿ ಕೆಲಸ ಆಗುತ್ತದೋ ಅಲ್ಲಿನವನ್ನು ತೆಗೆದುಕೊಳ್ಳುವುದು ಬಿಟ್ಟು ಇಲ್ಲಿಂದ ಜನರನ್ನು ರವಾನಿಸುವ ಅಗತ್ಯ ಏನಿದೆ?

ಶ್ರೀ ಧರ್ಮಸಿಂಗ್.—ನೀರು ಕೊಡತಕ್ಕಂಥಾದ್ದು ಬೆಂಗಳೂರು ನಗರದ ಜನರಿಗೆ, ಕಾವೇರಿ ಎರಡನೇ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ತೆಗೆದುಕೊಳ್ಳಬೇಕು ಎಂದು ನಿರ್ಣಯ ಮಾಡಿದ್ದೇವೆ. ಬೆಂಗಳೂರು ಜಿಲ್ಲೆಯ ಎಲ್ಲಾ ಜನರು ಮಾಡುತ್ತಾ ಇದ್ದಾರೆ. ಎಸ್.ಎಂ.ಆರ್.ನಲ್ಲಿ ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು, ಇದರಲ್ಲಿ ಆಕ್ಷೇಪಣೆ ಬರಬಾರದು ಎಂದು ಮಾಡಿದೆ. ಎಂಪ್ಲಾಯ್‌ಮೆಂಟ್ ಎಕ್‌ಚೇಂಜ್‌ನಿಂದ ಪಟ್ಟಿ ತರಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಎನ್.ಎಂ ಆರ್.ನ ಮೇಲೆ ತೆಗೆದುಕೊಳ್ಳುತ್ತೇವೆ. ಹೇಳೀ ಜನರು ಇದ್ದಾರೆ, ಅವರ ಬಗ್ಗೆ ಕೂಡ ವಿಚಾರ ಮಾಡುತ್ತೇವೆ.

ಶ್ರೀ ಬಿ.ವಿ ರಾಮಚಂದ್ರ ರೆಡ್ಡಿ.—ಗ್ರಾಮಾಂತರ ಪ್ರದೇಶಗಳಲ್ಲಿ ಎನ್.ಎಂ.ಆರ್.ಗೆ ಅರ್ಜಿಗಳನ್ನು ಬೋರ್ಡ್‌ನವರು ಆಂಗೀಕರಿಸುತ್ತಾ ಇಲ್ಲ. ನಗರದ ಪ್ರದೇಶದಿಂದ ಜನರನ್ನು ರವಾನೆ ಮಾಡುತ್ತಾ ಇದ್ದಾರೆ. ಪ್ರಾಜೆಕ್ಟ್ ನಡೆಯುತ್ತಿರುವ ಗ್ರಾಮಾಂತ ಪ್ರದೇಶಗಳಲ್ಲೇ ಸೂಕ್ತವಾದ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲಿಕ್ಕೆ ಆದೇಶ ನೀಡುತ್ತೀರಾ?

ಶ್ರೀ ಧರ್ಮಸಿಂಗ್.—ಎಲ್ಲಾ ಕಡೆ ಈ ಪ್ರಶ್ನೆ ಇದೆ. ಕಾವೇರಿ ಕೆಂಡ್ ಸ್ಟೇಜ್‌ನಲ್ಲಿ ದಿನಗೂಲಿ ಮೇಲೆ ತೆಗೆದುಕೊಳ್ಳಲಿಕ್ಕೆ ಆದೇಶ ಕೊಡಬಹುದು.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಡೈಲಿ ವೇಜಸ್ ಮೇಲೆ ತೆಗೆದುಕೊಳ್ಳಲಿಕ್ಕೆ ಯಾರಿಗೆ ಅರ್ಜಿ ಕೊಡಬೇಕು. ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪವರ್ ಕೊಟ್ಟುಬಿಟ್ಟಿದ್ದೀರಿ. ವಾಟರ್ ಸಪ್ಲೈ ಬೋರ್ಡ್ ಯಾವ ಸಿಸ್ಟಂನ್ನು ಫಾಲೋ ಮಾಡುತ್ತಾ ಇದ್ದಾರೆ.

ಶ್ರೀ ಧರ್ಮಸಿಂಗ್.—ಮೊದಲು ಚೀಫ್ ಇಂಜಿನಿಯರ್ ಮಾಡುತ್ತಾ ಇದ್ದರು. ಈಗ ಛೀಫ್‌ಇಂಜಿನಿಯರ್‌ಗೆ ಪವರ್ ಕೊಟ್ಟಿದ್ದೇವೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಲೋಕೋಪಯೋಗಿ ಇಲಾಖೆಯಲ್ಲಿ ಯಾವ ರೀತಿ ಡೈಲಿ ವೇಜಸ್ ಮೇಲೆ ತೆಗೆದುಕೊಳ್ಳುತ್ತಾರೋ ಅದೇ ರೀತಿ ಎಗ್ಸಿಕ್ಯೂಟಿವ್ ಇಂಜಿನಿಯರ್‌ಗೆ ತೆಗೆದುಕೊಳ್ಳಲಿಕ್ಕೆ ಏಕೆ ಪವರ್ ಕೊಡಬಾರದು?

ಶ್ರೀ ಧರ್ಮಸಿಂಗ್.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

MR. SPEAKER.—Now, the question hour is o'.